ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 29–10–2015

## ಪತ್ರಿಕಾ ಪ್ರಕಟಣೆ

# ಇಂದು ಪ್ರಮಾಣ ವಚನ ಸ್ವೀಕರಿಸಿದ ನೂತನ ಸಚಿವರ ಪರಿಚಯ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)

ಬೆಂಗಳೂರಿನ ರಾಜಭವನದ ಗಾಜಿನ ಮನೆಯಲ್ಲಿ ಇಂದು ಸಂಜೆ ನಡೆದ ವಿಶೇಷ ಸಮಾರಂಭದಲ್ಲಿ ರಾಜ್ಯದ ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. ಕರ್ನಾಟಕ ರಾಜ್ಯಪಾಲ ಶ್ರೀ ವಾಜೂಭಾಯಿ ವಾಲಾ ಅವರು ರಾಜ್ಯ ಸಚಿವ ಸಂಪುಟದ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು.

ರಾಜ್ಯದ ನೂತನ ಸಚಿವರಾಗಿ ರಾಜ್ಯ ವಿಧಾನ ಪರಿಷತ್ತಿನ ಸದಸ್ಯ ಡಾ: ಜಿ. ಪರಮೇಶ್ವರ್, (ದೇವರ ಹೆಸರಿನಲ್ಲಿ) ಅರಕಲಗೂಡು ಶಾಸಕ ಎ. ಮಂಜು, (ತಾಯಿ ಹೆಸರಿನಲ್ಲಿ) ಧಾರವಾಡ ಗ್ರಾಮಾಂತರ ಶಾಸಕ ವಿನಯ್‌ಕುಲಕರ್ಣಿ (ದೇವರ ಹೆಸರಿನಲ್ಲಿ) ಹಾಗೂ ಹಾನಗಲ್ ಶಾಸಕ ಮನೋಹರ ತಹಸೀಲ್ದಾರ್ (ದೇವರ ಹೆಸರಿನಲ್ಲಿ) ಅವರು ಸತ್ಯ ನಿಷ್ಠೆಯ ಮೇಲೆ ಅಧಿಕಾರ ಹಾಗೂ ಗೌಪ್ಯತೆಯ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರುಗಳಾದ ಡಿ.ಕೆ. ಶಿವಕುಮಾರ್, ಕೆ.ಜೆ. ಜಾರ್ಜ್, ಎಸ್.ಆರ್. ಪಾಟೀಲ್, ಶ್ಯಾಮನೂರು ಶಿವಶಂಕರಪ್ಪ ಸೇರಿದಂತೆ ಸಂಪುಟದ ಹಲವಾರು ಸಚಿವರು, ಹಿರಿಯ ಶಾಸಕರುಗಳು, ರಾಜ್ಯದ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ರಾಜ್ಯದ ಪೊಲೀಸ್ ಮಹಾ ನಿರ್ದೇಶಕ ಶ್ರೀ ಓಂಪ್ರಕಾಶ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಶ್ರೀ ನರಸಿಂಹ ಎಸ್. ಮೇಘರಿಕ್ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## 1) ಡಾ: ಜಿ. ಪರಮೇಶ್ವರ್

ಡಾ: ಜಿ. ಪರಮೇಶ್ವರ್ ಅವರು ಇಂದು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. 1951 ರ ಆಗಸ್ಟ್ 6 ರಂದು ತುಮಕೂರಿನ ಪ್ರಖ್ಯಾತ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ದಿವಂಗತ ಹೆಚ್. ಎಂ. ಗಂಗಾಧರಯ್ಯ ಅವರ ಪುತ್ರರು. ಕೃಷಿಯಲ್ಲಿ ಸ್ನಾತಕೋತ್ತರ ವಿಜ್ಞಾನ ಪದವಿ ಹಾಗೂ ಡಾಕ್ಟರೇಟ್ ಗಳಿಸಿದ್ದಾರೆ.

ಕೃಷಿ ಮತ್ತು ಶಿಕ್ಷಣ ಕ್ಷೇತ್ರವನ್ನು ವೃತ್ತಿಯಾಗಿ ಸ್ವೀಕರಿಸಿದ್ದಾರೆ. 1989 ರಲ್ಲಿ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾದ ಇವರು ಮತ್ತೆ 1999 ರಲ್ಲಿ ವಿಧಾನ ಸಭಾ ಸದಸ್ಯರಾಗಿದ್ದರು. ಉನ್ನತ ಶಿಕ್ಷಣ, ರೇಷ್ಮೆ, ವಿಜ್ಞಾನ ಮತ್ತು ತ್ರಂತ್ರಜ್ಞಾನ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. 2008 ರಲ್ಲಿ ಪುನ: ರಾಜ್ಯ ವಿಧಾನ ಸಭೆಗೆ ಆಯ್ಕೆಯಾಗಿದ್ದರು. 2010 ರಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ, ಶ್ರೀರಂಗ ಹವ್ಯಾಸಿ ಕಲಾವಿದರು ಸಂಸ್ಥೆಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. 2014 ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದರು. ಇದೀಗ ಡಾ: ಜಿ. ಪರಮೇಶ್ವರ್ ಅವರು ಕರ್ನಾಟಕ ರಾಜ್ಯ ಸಚಿವ ಸಂಪುಟದಲ್ಲಿ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

## 2) ಶ್ರೀ ಎ. ಮಂಜು

ಎ. ಮಂಜು ಅವರು ಹಾಸನ ಜಿಲ್ಲೆ ಅರಕಲಗೂಡು ಕ್ಷೇತ್ರದ ಶಾಸಕರು. ಹಾಸನ ಜಿಲ್ಲೆಯ ಕೊಣನೂರಿನಲ್ಲಿ 1958 ರ ನವೆಂಬರ್ 1 ರಂದು ಶ್ರೀ ದೇವರಹಟ್ಟಿ ಅಣ್ಣೇಗೌಡ ಅವರ ಪುತ್ರರಾಗಿ ಜನಿಸಿದ ಮಂಜು ಅವರು ಕಲಾ ತ್ತು ಮತ್ತು ಕಾನೂನು ಪದವಿಧರರು. 1999 ಹಾಗೂ 2008 ರಲ್ಲಿ ರಾಜ್ಯ ವಿಧಾನ ಸಭೆಯ ಸದಸ್ಯರಾಗಿದ್ದರು. 1993 ರಲ್ಲಿ ತಂಬಾಕು ಮಂಡಳಿ ಉಪಾಧ್ಯಕ್ಷರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರಾಗಿ, ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಎ. ಮಂಜು ಅವರು 2013 ರ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅವರು ಇಂದು ಸ್ವತಂತ್ರ ಖಾತೆ ರಾಜ್ಯ ಸಚಿವ ಸಂಪುಟದ ನೂತನ ರಾಜ್ಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

## 3) ಶ್ರೀ ವಿನಯ್‌ಕುಲಕರ್ಣಿ

ವಿನಯ್ ಕುಲಕರ್ಣಿ ಅವರು ಧಾರವಾಡ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ಶಾಸಕರು 1968 ರ ನವೆಂಬರ್ 7 ರಂದು ರಾಜಶೇಖರಪ್ಪ ಅವರ ಪುತ್ರರಾಗಿ ಜನಿಸಿದರು. ಕೃಷಿಯಲ್ಲಿ ವಿಜ್ಞಾನ ಪದವಿ ಪಡೆದಿದ್ದಾರೆ. ಅವರು ಇಂದು ರಾಜ್ಯ ಸಚಿವ ಸಂಪುಟದ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರು ಇಂದು ಸ್ವತಂತ್ರ ಖಾತೆ ರಾಜ್ಯ ಸಚಿವ ಸಂಪುಟದ ನೂತನ ರಾಜ್ಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

## 4) ಶ್ರೀ ಮನೋಹರ್ ಹೆಚ್. ತಹಸೀಲ್ದಾರ್

ಮನೋಹರ್ ಹೆಚ್. ತಹಸೀಲ್ದಾರ್ ಅವರು ಹಾವೇರಿ ಜಿಲ್ಲೆಯ ಹಾನಗಲ್ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. 1946 ರ, ಜುಲೈ 21 ರಂದು ತಹಸೀಲ್ದಾರ್ ಹನುಮಂತಪ್ಪ ಅವರ ಪುತ್ರರಾಗಿ ಜನಿಸಿದರು. ಮೆಕ್ಯಾನಿಕಲ್‌ನಲ್ಲಿ ಇಂಜಿನಿಯರಿಂಗ್ ಪದವಿ ಗಳಿಸಿದರುವ ಇವರು ರಾಜ್ಯ ವಿಧಾನ ಸಭೆಗೆ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಮನೋಹರ ತಹಸೀಲ್ದಾರ್ ಅವರು ರಾಜ್ಯ ವಿಧಾನ ಸಭೆಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಇಂದು ರಾಜ್ಯ ಸಚಿವ ಸಂಪುಟದ ನೂತನ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಡಿಪಿಎಂ/ಬಾಬು/ಕೆಎಂ

## ರಾಷ್ಟ್ರಮಟ್ಟದ ವಿದ್ಯಾರ್ಥಿ ವೇತನಕ್ಕೆ ಅರ್ಹ ವಿದ್ಯಾರ್ಥಿಗಳಿಂದ ನವೀಕರಣ ಪ್ರಕ್ರಿಯೆ

**ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)**

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಕೇಂದ್ರ ಸರ್ಕಾರದ ವತಿಯಿಂದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗಾಗಿ ನೀಡುವ ರಾಷ್ಟ್ರಮಟ್ಟದ ವಿದ್ಯಾರ್ಥಿ ವೇತನಕ್ಕೆ ' ಅರ್ಹ ವಿದ್ಯಾರ್ಥಿಗಳಿಂದ **ಪ್ರಥಮ, ದ್ವಿತೀಯ, ತೃತೀಯ, ನಾಲ್ಕನೇ ನವೀಕರಣದ ಪ್ರಕ್ರಿಯೆಯನ್ನು** ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಸಂಬಂಧಪಟ್ಟ ಮಾಹಿತಿಯನ್ನು (ಕಡ್ಡಾಯವಾಗಿ ವಿದ್ಯಾರ್ಥಿ ಸಂಖ್ಯೆಯೊಂದಿಗೆ) ನಿಗಧಿತ ನಮೂನೆಯಲ್ಲಿ ದಿನಾಂಕಃ19–11–2015ರೊಳಗಾಗಿ ಪ್ರಾಂಶುಪಾಲರಿಗೆ ನೀಡಲು ತಿಳಿಸಿದೆ ಅಥವಾ ನಿಯಮಾನುಸಾರ ಅರ್ಜಿಯನ್ನು ಎಲ್ಲಾ ದೃಢೀಕರಣಗಳೊಂದಿಗೆ ದಿನಾಂಕಃ21–11–2015ರೊಳಗಾಗಿ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿ ತಿಳಿಸಿದೆ. ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಂದ ಬಂದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ನಿಗಧಿತ ನಮೂನೆಯಲ್ಲಿ ***ದಿನಾಂಕಃ21–11–2015***ರ ಒಳಗೆ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ತಿಳಿಸಿದೆ. ವಿದ್ಯಾರ್ಥಿಗಳು ಈ ಮೊದಲು ಪ್ರಥಮ, ದ್ವಿತೀಯ, ತೃತೀಯ, ನಾಲ್ಕನೇ ನವೀಕರಣದ ನಿಮಿತ್ತ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅವುಗಳನ್ನು ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಥಿಗಳು ಪುನಃ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ದೃಢೀಕರಣಗಳೊಂದಿಗೆ ಸಲ್ಲಿಸುವುದು ಹಾಗೂ ಅರ್ಜಿಯ ನಕಲು ಪ್ರತಿಗಳನ್ನು ಕಡ್ಡಾಯವಾಗಿ ತಮ್ಮ ಬಳಿ ಇರಿಸಿಕೊಳ್ಳುವುದು. **ಈ ವಿದ್ಯಾರ್ಥಿ ವೇತನಕ್ಕೆ ಆಯ್ಕೆಗೊಂಡಿರುವ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಇಲಾಖಾ ಸೂಚನೆ ಇಲ್ಲದೆ ಅರ್ಜಿಯನ್ನು online ಮೂಲಕ ಸಲ್ಲಿಸಬಾರದಾಗಿ ತಿಳಿಸಿದೆ.** **MHRD SCHOLARSHIP RENEWAL The Nodal Officer, Room No.302, III Floor, MHRD Scholarship Section, Dept. of Pre-University Education,18th Cross, Malleshwaram,Bangalore-560 012. Telephone No.080-23311330.** **ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಅಂತರ್ಜಾಲಗಳನ್ನು ಸಂಪರ್ಕಿಸಬಹುದು.**

ಪ್ರಥಮ ನವೀಕರಣಕ್ಕೆ **http://pue.kar.nic.in =» Scholarship =» MHRD Scholarship =» MHRD Scholarship 2014 - I RENEWAL.** ದ್ವಿತೀಯ ನವೀಕರಣಕ್ಕೆ **http://pue.kar.nic.in =» Scholarship =» MHRD Scholarship =» MHRD Scholarship 2013 - II RENEWAL.** ತೃತೀಯ ನವೀಕರಣಕ್ಕೆ **http://pue.kar.nic.in =» Scholarship =» MHRD Scholarship =» MHRD Scholarship 2012 – III RENEWAL** ಹಾಗೂ ನಾಲ್ಕನೇ ನವೀಕರಣಕ್ಕೆ **http://pue.kar.nic.in =» Scholarship =» MHRD Scholarship =» MHRD Scholarship 2011 – IV RENEWAL.** ಸಂಪರ್ಕಿಸಬಹುದು.

ಬಾಬು/ಕೆಎಂ

## ಡಾ. ಬಿ. ಎನ್. ಸುರೇಶ್‌ರವರಿಗೆ ಜೀವಮಾನ ಸಾಧನೆ ಪ್ರಶಸ್ತಿ

**ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)**



ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ 2015ರ ಜೀವಮಾನ ಸಾಧನೆ ಪ್ರಶಸ್ತಿಗಾಗಿ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಪದ್ಮಭೂಷಣ ಡಾ. ಬಿ. ಎನ್. ಸುರೇಶ್, ನಿವೃತ್ತ ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ & ಟೆಕ್ನಾಲಜಿ, ತಿರುವನಂತಪುರಂ. ಪ್ರಸ್ತುತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಇವರನ್ನು ಆಯ್ಕೆ ಮಾಡಿದೆ.

ದಿನಾಂಕ 5ನೇ ನವೆಂಬರ್ 2015 ರಂದು ಬೆಂಗಳೂರಿನ ವಿ. ವಿ. ಪುರಂನಲ್ಲಿರುವ ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕುವೆಂಪು ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಅಕಾಡೆಮಿಯ ಎಂಟನೇ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ಪ್ರಶಸ್ತಿಯು ಸ್ವರ್ಣ ಪದಕ, ರೂ. 1.00 ಲಕ್ಷ ನಗದು ಹಾಗೂ ಸನ್ಮಾನ ಪತ್ರವನ್ನು ಒಳಗೊಂಡಿರುತ್ತದೆ.

ಪಲ್ಲವಿ/ಕೆಎಂ

## ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅಧ್ಯಕ್ಷ ನೇಮಕ

**ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರವು ಆಡಳಿತ ನ್ಯಾಯಮಂಡಳಿ ಕಾಯ್ದೆ 1985 ರನ್ವಯ, ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಸದಸ್ಯರಾದ ಮೂಸ್ ಕುನ್ಹಿ ನಾಯಮರ್ೂಲ್ ಅವರನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.

ಪಲ್ಲವಿ:ಜಿಪಿಆರ್.

## ಬೆಂಗಳೂರು ಬಾಲಭವನಗಳಲ್ಲಿ ಮಕ್ಕಳಿಗೆ ವಾರ್ಷಿಕ ಶಿಬಿರ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)

ಬೆಂಗಳೂರು ಬಾಲಭವನವು 5 ರಿಂದ 16 ವರ್ಷದ ಮಕ್ಕಳಿಗೆ ಕ್ರಿಯಾತ್ಮಕ ಮತ್ತು ಸೃಜನಾತ್ಮಕ ಚಟುವಟಿಕೆಗಳಲ್ಲಿ ಕಬ್ಬನ್ ಉದ್ಯಾನವನದ ಬಾಲಭವನ, ಜಯನಗರ, ರಾಜಾಜಿನಗರ, ಜೀವನಭೀಮಾನಗರ ಹಾಗೂ ಕೋಲ್ಸ್ ಪಾರ್ಕ್ ಮಿನಿ ಭಾಲಭವನಗಳಲ್ಲಿ ವಾರ್ಷಿಕ ಶಿಬಿರವನ್ನು ಏರ್ಪಡಿಸಿದೆ.

ಶಿಬಿರವು ಅಕ್ಟೋಬರ್ 31 ರಿಂದ 2016 ರ ಫೆಬ್ರವರಿ 28 ರವರೆಗೆ ಪ್ರತಿ ಶನಿವಾರ ಹಾಗೂ ಭಾನುವಾರಗಳಂದು ನಡೆಯಲಿದೆ. ಈ ಶಿಬಿರದ ಪ್ರವೇಶ ಅರ್ಜಿಗಳನ್ನು ಅಕ್ಟೋಬರ್ 29 ರಿಂದ ಬೆಳಿಗ್ಗೆ 11-00 ರಿಂದ ಸಂಜೆ 5-00 ಗಂಟೆವರೆಗೆ ಬೆಂಗಳೂರು ಕಬ್ಬನ್ ಉದ್ಯಾನವನದಲ್ಲಿರುವ ಬಾಲಭವನದಲ್ಲಿ ನೀಡಲಾಗುವುದು.

ಆಸಕ್ತ ಮಕ್ಕಳು ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಬಾಲಭವನ ಸೊಸೈಟಿಯನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080 – 22864189/22861423 ಅಥವಾ ಮಿಂಚಂಚೆ secybalbhavan.bng@gmail.com ಅನ್ನು ಸಂಪರ್ಕಿಸಲು ಕೋರಿದೆ.

ಕಬ್ಬನ್ ಉದ್ಯಾನವನ ಬಾಲಭವನದಲ್ಲಿ ರಂಗ ಚಟುವಟಿಕೆ, ಜೇಡಿಮಣ್ಣಿನ ಕಲೆ, ತಬಲ, ಕೀಬೋರ್ಡ್, ಗಿಟಾರ್, ಕಲರಿಪಯಿಟ್ಟು, ಬಾಟಿಕ್ ಮತ್ತು ಪೇಪರ್ ಮೆಶ್‌ವರ್ಕ್, ಕರ್ನಾಟಕ ಶಾಸ್ತ್ರೀಯ ಸಂಗೀತ, ಭರತನಾಟ್ಯ ಹಾಗೂ ಕರಕುಶಲ ಚಟವಟಿಕೆಗಳನ್ನು ನಡೆಸಲಾಗುವುದು.

ಜಯನಗರ 7ನೇ ಬ್ಲಾಕ್‌ನ ದೀಪಕ್ ಆಸ್ಪತ್ರೆ ಎದುರು ಇರುವ, ಕೋಲ್ಸ್ ಪಾರ್ಕ್, ರಾಜಾಜಿನಗರ ಹಾಗೂ ಜೀವನಭೀಮಾನಗರಗಳಲ್ಲಿರುವ ಮಿನಿ ಭಾಲಭವನದಲ್ಲಿ ಚಿತ್ರಕಲೆ, ಕರಕುಶಲಕಲೆ ಹಾಗೂ ಸಮೂಹ ನೃತ್ಯ ಚಟುವಟಿಕೆ ನಡೆಸಲಾಗುವುದು ಎಂದು ಬಾಲಭವನದ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಬಾಬು:ಜಿಪಿಆರ್.

## ಸಾರ್ವಜನಿಕರ ವಾಹನ ಚಾಲನಾ ಪರೀಕ್ಷೆ ಸಮಯ ಬದಲಾವಣೆ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)

ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಖಾಲಿಯಿರುವ ವಾಹನ ಚಾಲಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ 4224 ಅಭ್ಯರ್ಥಿಗಳ ಚಾಲನಾ ನೈಪುಣ್ಯತೆಯನ್ನು ಪರೀಕ್ಷಿಸಲು ದಿನಾಂಕ 28-10-2015 ರಿಂದ ದಿನಾಂಕ 19-12-2015 ರವರೆಗೆ ಕಚೇರಿ ಕೆಲಸದ ದಿನಗಳಲ್ಲಿ, ಪ್ರತಿ ದಿನ 100 ಅಭ್ಯರ್ಥಿಗಳಂತೆ ಮಧ್ಯಾಹ್ನ 12-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಅಭ್ಯರ್ಥಿಗಳಿಗೆ ಚಾಲನಾಪರೀಕ್ಷಾ ಪಥದಲ್ಲಿ ಪರೀಕ್ಷೆ ನಡೆಸಲಾಗುವುದು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಕಚೇರಿ, ಜ್ಞಾನಭಾರತಿ, ಮಲ್ಲತಹಳ್ಳಿ, ಬೆಂಗಳೂರಿನ ಸಾರಿ ಆಯುಕ್ತರು ತಿಳಿಸಿದ್ದಾರೆ.

ಆದ್ದರಿಂದ ಸಾರ್ವಜನಿಕರ ಡಿ.ಎಲ್. ಪರೀಕ್ಷೆಯನ್ನು ಬೆಳಿಗ್ಗೆ 8-00 ರಿಂದ 11-30 ರ ಅವಧಿಯಲ್ಲಿ ಮಾಡಲು ತೀರ್ಮಾನಿಸಲಾಗಿದೆ. ಸಾರ್ವಜನಿಕರು ಜ್ಞಾನಭಾರತಿ, ಮಲ್ಲತ್ತಹಳ್ಳಿ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಚಾಲನಾ ಅನುಜ್ಞಾ ಪತ್ರಕ್ಕಾಗಿ ಅರ್ಜಿ ಸಲ್ಲಿಸುವವರು ಕಚೇರಿಯ ಕೆಲಸದ ದಿನಗಳಲ್ಲಿ ಬೆಳಿಗ್ಗೆ 8-00 ರಿಂದ 11-30 ರೊಳಗಾಗಿ ಪರೀಕ್ಷೆಗೆ ಹಾಜರಾಗಬೇಕೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ:ಜಿಪಿಆರ್.

## ಅಲ್ಪಸಂಖ್ಯಾತರಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ವಿದ್ಯಾರ್ಥಿ ವೇತನ

**ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)**

ಅಲ್ಪಸಂಖ್ಯತರ ನಿರ್ದೇಶನಾಲಯವು ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು, ಸಿಖ್ ಮತ್ತು ಪಾರ್ಸಿ ಸಮುದಾಯಗಳ ಒಟ್ಟು 184 ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ವಿದ್ಯಾರ್ಥಿ ವೇತನ ಮಂಜೂರು ಮಾಡಿದೆ. ಅಲ್ಲದೇ 67 ಅಭ್ಯರ್ಥಿಗಳನ್ನು ಐ.ಎ.ಎಸ್. ಪರೀಕ್ಷೆಯ ಪೂರ್ವಭಾವಿ ತರಬೇತಿಗೆ ನಿಯೋಜಿಸಿದೆ. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ www.gokdom.kar.nic.in ವಿಳಾಸ ಸಂಪರ್ಕಿಸಲು ಅಲ್ಪಸಂಖ್ಯಾತರ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಜಿಪಿಆರ್.

## 'ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ'-ತೋಟಗಾರಿಕೆ ಸಚಿವ

**ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ)**

ರಾಜ್ಯದ ಪ್ರಮುಖ ತೋಟಗಾರಿಕೆ ಬೆಳೆಗಳ ಮೌಲ್ಯ ವೃದ್ಧಿಸುವ ದೂರದೃಷ್ಟಿ ಹೊಂದಿರುವ 'ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ' ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ರಾಜ್ಯದಲ್ಲಿನ ತೋಟಗಾರಿಕೆ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ವೃದ್ಧಿಸುವ ಹಾಗೂ ಆಹಾರ ಮತ್ತು ಪೌಷ್ಠಿಕಾಂಶ ಭದ್ರತೆ ಒದಗಿಸುವ ಗುರಿಯನ್ನು ಯೋಜನೆ ಹೊಂದಿರುತ್ತದೆ ಎಂದು ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಾಮನೂರು ಶಿವಶಂಕರಪ್ಪ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನಾ ಸಭಾಂಗಣದಲ್ಲಿ ಇಂದು  ಏರ್ಪಡಿಸಲಾಗಿದ್ದ ಪತ್ರಿಕಾಗೋಷ್ಟಿಯನ್ನುದ್ದೇಶಿಸಿ ಮಾತನ್ನಾಡಿದ ಅವರು , *ಈ* ಯೋಜನೆಯಡಿ ಬೀಜದಿಂದ ಉತ್ಪನ್ನದವರೆಗೆ ಆರ್ಥಿಕ ಸಹಾಯ ನೀಡುವ ಮೂಲಕ ರೈತ ಗುಂಪುಗಳನ್ನು ಸಶಕ್ತಗೊಳಿಸಬಹುದಾಗಿದೆ ಎಂದ ಅವರು, ಉತ್ತಮ ಗುಣಮಟ್ಟದ ಬೀಜ, ಗೊಬ್ಬರ, ಕೀಟನಾಶಕಗಳು, ಸುಧಾರಿತ ಬೇಸಾಯ ಪದ್ಧತಿಗಳು , ಉತ್ಪನ್ನಗಳಿಗೆ ಹೆಚ್ಚಿನ ಮೌಲ್ಯ ದೊರಕಿಸಿಕೊಡುವುದಲ್ಲದೆ,  ಉತ್ಪಾದಕತೆಯನ್ನು ಸಹ ಹೆಚ್ಚಿಸಬಹುದಾಗಿರುತ್ತದೆ ಎಂದರು.

ರೈತರನ್ನು ಸಂಘಟಿಸಿ ಸಧೃಡಗೊಳಿಸಲು ‘ತೋಟಗಾರಿಕೆ ರೈತ ಉತ್ಪಾದಕರ ಸಂಘಗಳ ಸದಸ್ಯ’ರನ್ನಾಗಿ(FPO) ರೈತರನ್ನು  ಸಂಯೋಜಿಸಲಾಗುತ್ತಿದ್ದು, ಈ ಸಂಘಗಳ ಮೂಲಕ ನಿರ್ಮಿಸಲಾಗುವ ಮೂಲಭೂತ ಸೌಕರ್ಯಗಳಾದ ಸಂಗ್ರಹಣಾ  ಕೇಂದ್ರಗಳು, ಶೈತ್ಯಾಗಾರಗಳು, ಕೃಷಿ ಯಾಂತ್ರೀಕರಣ ಸಲಕರಣೆಗಳು ಮತ್ತು ಸಂಸ್ಕರಣಾ ಘಟಕಗಳನ್ನು ಹೊಂದಲು ಶೇ.೯೦ ರಷ್ಟು ಸಹಾಯಧನ ನೀಡುವುದರ ಮೂಲಕ  ರಾಜ್ಯ ಸರ್ಕಾರ  ರೈತರನ್ನು ಬೆಂಬಲಿಸಲಿದೆ  ಎಂದರು.

ರಾಜ್ಯದ ರೈತರನ್ನು ಒಗ್ಗೂಡಿಸಿ ಉತ್ಪಾದಕರ ಸಂಸ್ಥೆಗಳನ್ನಾಗಿ ಒಟ್ಟುಗೂಡಿಸಿ ಅವರಿಗೆ ತಂತ್ರಜ್ಞಾನ, ತರಬೇತಿ, ಮಾರ್ಗದರ್ಶನ, ಬಂಡವಾಳ ಮತ್ತು ಮಾರುಕಟ್ಟೆಗಳಿಗೆ ಹೆಚ್ಚಿನ ಮುಕ್ತ ಅವಕಾಶವನ್ನು  ಈ ಸಂಘಗಳು ಒದಗಿಸಲಿದ್ದು, ಸರ್ಕಾರದ ಬೆಂಬಲ, ಸಂಶೋಧಕ ಸಂಸ್ಥೆಗಳು, ನಾಗರಿಕ ಸಹಕಾರ ಸಂಘಗಳು ಮತ್ತು ಖಾಸಗಿ ಕ್ಷೇತ್ರದೊಂದಿಗಿನ ಸಹಯೋಗದೊಂದಿಗೆ  ರೈತರ ಉತ್ಪನ್ನಗಳಿಗೆ ಅಧಿಕ ಲಾಭಗಳನ್ನು  ಪಡೆಯಲು ಸಂಘ ನೆರವಾಗುತ್ತದೆ ಎಂದರು.

೨೦೧೪-೧೫ನೇ ಸಾಲಿನಲ್ಲಿ ೫೪ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆಗಳನ್ನು ರಾಜ್ಯಾದ್ಯಂತ ಸ್ಥಾಪಿಸಲು ಕ್ರಮ ವಹಿಸಲಾಗಿದ್ದು, ಸದರಿ ಕೃಷಿ ಉತ್ಪಾದಕರ ಸಂಘಗಳು ೨೦ ರೈತರ ಒಂದು ಆಸಕ್ತ ಗುಂಪಿನಂತೆ ಒಟ್ಟು ೫೦ ಗುಂಪುಗಳ ೧೦೦೦ ರೈತರನ್ನು  ಒಳಗೊಂಡಿರುತ್ತದೆ ಎಂದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೀವ್ ಚಾವ್ಲಾ ಅವರು  ಇಲಾಖೆಗೆ ಸಂಬಂಧಿಸಿದಂತೆ ಸಮಗ್ರ ಮಾಹಿತಿ  ನೀಡುತ್ತಾ, ಕರ್ನಾಟಕ ರಾಜ್ಯವು ರಾಷ್ಟ್ರದ ತೋಟಗಾರಿಕೆ  ವಿಸ್ತೀರ್ಣದಲ್ಲಿ ೩ನೇ ಸ್ಥಾನ ಹಾಗೂ ಉತ್ಪಾದನೆಯಲ್ಲಿ ೭ನೇ ಸ್ಥಾನ ಪಡೆದಿದ್ದು, ತೋಟಗಾರಿಕೆ  ಕ್ಷೇತ್ರವು ೨೦.೦೫ ಲಕ್ಷ ಹೆಕ್ಟೇರ್ , ಉತ್ಪಾದನೆ ೧೬೯.೪೦ ಲಕ್ಷ ಟನ್ನುಗಳಾಗಿದ್ದು, ತೋಟಗಾರಿಕೆ ಉತ್ಪನ್ನಗಳ ನೇರ ಆದಾಯ ೩೬,೦೦೦ ಕೋಟಿ ಎಂದು ತಿಳಿಸಿದರು.

ರೈತರ ಸಮಸ್ಯಗಳನ್ನು ಪರಿಹರಿಸಲು ಸರ್ಕಾರ ಎಪಿಎಂಸಿ ಮಾರುಕಟ್ಟೆ ಕಾರ್ಯವಿಧಾನದಲ್ಲಿ ಸುಧಾರಣೆ,ಎಪಿಎಂಸಿ ಕಾಯ್ದೆಯ ಸರಳೀಕರಣ,ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ  ಮುಂತಾದ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ ಎಂದು ವಿವರಿಸಿದರು.

ರಾಜ್ಯದ  ತೋಟಗಾರಿಕೆ ಇಲಾಖೆಯ ಒಂದು ದಶಕದ ಸಾಧನೆಯನ್ನು ಪರಿಗಣಿಸಿ ಅಗ್ರಿಕಲ್ಚರ್ ಟುಡೆ ಪತ್ರಿಕಾ  ಸಮೂಹವು ಡಾ.ಎಂ.ಎಸ್ ಸ್ವಾಮಿನಾಥನ್ ರವರ ನೇತೃತ್ವದ ಸಮಿತಿಯ ಶಿಫಾರಸ್ಸಿನೊಂದಿಗೆ ಕರ್ನಾಟಕ ರಾಜ್ಯವನ್ನು ೨೦೧೫ನೇ ಸಾಲಿಗೆ ರಾಷ್ಟ್ರದ ಅತ್ಯುನ್ನತ  ತೋಟಗಾರಿಕೆ ರಾಜ್ಯವೆಂದು ಘೋಷಿಸಿರುತ್ತದೆ ಎಂದು ಅವರು ತಿಳಿಸಿದರು.

ಪಲ್ಲವಿ/ಮಮತ